**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿಸಿ ನಂಬರ : 34/2024**

| | | | |
|---|---|---|---|
| ಸಾಕ್ಷಿಯ ಹೆಸರು | : ಫಯಾಜ್ ಅಲಿ ಬೇಗ್ | | ಸಿ.ಡಬ್ಲ್ಯು 2 |
| ತಂದೆಯ ಹೆಸರು | : ಮೊಹಿದ್ದಿನ್ ಬೇಗ್ | | ಪಿ.ಡಬ್ಲ್ಯು 3 |
| ವಯಸ್ಸು | : 48 ವರ್ಷ | | |
| ಉದ್ಯೋಗ | : ಖಾಸಗಿ ಉದ್ಯೋಗ | | |
| ವಾಸ ಸ್ಥಳ | : ತರೀಕೆರೆ | | |

ದಿನಾಂಕಃ **15-04-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-1 ಮತ್ತು 3 ಇವರ ಪರಿಚಯ ಇದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ನಿಪಿ.2 ಎಂದು ಗುರುತಿಸಲಾದ ಸ್ಥಳ ಪಂಚನಾಮೆಯ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಚಾಸಾ-1 ರವರ ಮನೆಯಲ್ಲಿ ಹಾಕಿರುತ್ತೇನೆ. ಸದರಿ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. 2023 ರ ಸೆಪ್ಟೆಂಬರ್ ತಿಂಗಳಿನಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ಮಾಡಿರುವ ಪಂಚನಾಮೆಯ ವೇಳೆಯಲ್ಲಿ ಸದರಿ ಸಹಿಯನ್ನು ಹಾಕಿರುತ್ತೇನೆ. ಅವರ ಮನೆಯಿಂದ ಕಾರು, ಬಂಗಾರ ಮತ್ತು ಸ್ವಲ್ಪ ಹಣ ಕಳ್ಳತನವಾಗಿದೆ ಎಂದು ಗೊತ್ತಾಯಿತು. ಸಾಕ್ಷಿಗೆ ನಿಪಿ.3 ರಿಂದ 7 ರಲ್ಲಿ ತಾವು ಇರುವುದಾಗಿ ತಿಳಿಸುತ್ತಾರೆ ಮತ್ತು ಅವುಗಳನ್ನು ಪಂಚನಾಮೆಯ ಕಾಲಕ್ಕೆ ತೆಗೆಯಲಾಗಿದೆ ಎಂದು ಹೇಳುತ್ತಾರೆ. ಚಾಸಾ- 1 ರವರು ಕಳ್ಳತನವಾದ ಸ್ಥಳವನ್ನು ತೋರಿಸಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಂಚನಾಮೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಕೊಟ್ಟಿಲ್ಲ. ಪೊಲೀಸರು ಸಹಿ ಮಾಡು ಎಂದು ದಾಖಲೆಯಲ್ಲಿ ಮಾತ್ರ ಸಹಿ ಮಾಡಿದ್ದೇನೆ. ಪೊಲೀಸರು ಹೇಳಿದ ಕಾರಣಕ್ಕೆ ಫೋಟೊ ತೆಗೆಸಿಕೊಂಡಿದ್ದೇನೆ. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಮಾಹಿತಿ ಇಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

*ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ*
*ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.*